ಬೆಂಗಳೂರು ಇ.ಎಸ್.ಐ. ಆಸ್ಪತ್ರೆಗಳಲ್ಲಿ, ಚಿಕಿತ್ಸಾಲಯಗಳಲ್ಲಿ ಔಷಧಿಗಳ ದುರುಪಯೋಗ

೯೮೦. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಕಂದಾಯ ಹಾಗೂ ಕಾರ್ಮಿಕ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಬೆಂಗಳೂರು ನಗರ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಗಳಿಗೆ/ಚಿಕಿತ್ಸಾಲಯಗಳಿಗೆ ಸರಬರಾಜು ಮಾಡಿದ ಔಷಧಿಗಳು ಅಧಿಕ ಪ್ರಮಾಣದಲ್ಲಿ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ 'ಕಾರಾವಿ ಉಪಯೋಗಕ್ಕಾಗಿ ಮಾರಾಟಕ್ಕಲ್ಲ' ಎಂಬ ಮೊಹರುಳ್ಳ ಔಷಧಿಗಳು ಬೆಂಗಳೂರು ನಗರದ ಮಲ್ಲೇಶ್ವರಂ, ಶ್ರೀರಾಮಪುರ, ರಾಜಾಜಿನಗರ ಮುಂತಾದ ಕಡೆಗಳಲ್ಲಿ ಎಲ್ಲಾ ಔಷಧಿ ಅಂಗಡಿಗಳಲ್ಲಿ ಸುಲಭವಾಗಿ ದೊರೆಯುತ್ತಿರುವುದು ನಿಜವೇ ?

ಇ) ಇ.ಎಸ್.ಐ. ಔಷಧಿಗಳ ದುರುಪಯೋಗದ ಬಗ್ಗೆ ಉನ್ನತಮಟ್ಟದ ವಿಚಾರಣೆ ನಡೆಸಲು ಸರ್ಕಾರದ ವತಿಯಿಂದ ತೆಗೆದುಕೊಂಡ ಕ್ರಮವೇನು ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ, ಹಾಗೂ ಕಾರ್ಮಿಕ ಸಚಿವರು).—

ಅ) ಅಧಿಕ ಪ್ರಮಾಣದಲ್ಲಿ ಔಷಧಿಗಳು ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ, ಆದಾಗ್ಯೂ ಕಾರಾವಿ ಚಿಕಿತ್ಸಾಲಯ, ದಾಸರಹಳ್ಳಿ ಮತ್ತು ಕಾರಾವಿ ಆಸ್ಪತ್ರೆ ಇಂದಿರಾನಗರ ಇಲ್ಲಿ ಔಷಧಿ ದುರುಪಯೋಗದ ಆರೋಪದ ಮೇಲೆ ಪ್ರಕರಣವು ಕಂಡುಬಂದಿದ್ದು ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಕಾರಾವಿ ಆಸ್ಪತ್ರೆ, ರಾಜಾಜಿನಗರ ಇಲ್ಲಿ ಔಷಧಿಗಳ ಕಳ್ಳತನದ ಆರೋಪದ ಮೇಲೆ ಪ್ರಕರಣವು ಪೋಲೀಸರಿಂದ ದಾಖಲಾಗಿದ್ದು ಸಂಬಂಧಪಟ್ಟ ನೌಕರರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ.

ಆ) ನಿಜವಲ್ಲ.

ಇ) ಮೇಲೆ 'ಆ'ವಲ್ಲಿ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು.—ಮಂಡಿಸಲಾಯಿತು. ಮಾನ್ಯ ಶಿವರಾಮೇಗೌಡರೆ ತಮ್ಮ ಪ್ರಶ್ನೆಗಳ ಬಗ್ಗೆ ಏನೋ ಕೇಳಬೇಕೆಂದಿದ್ದಿರಿ. ಈಗ ಕೇಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ —ಮಾನ್ಯ ಅಧ್ಯಕ್ಷರೆ, ೧೮ ದಿವಸಗಳಿಂದ ಸಭೆ ನಡೆಯುತ್ತಿದೆ. ನನ್ನ ೮ ಪ್ರಶ್ನೆಗಳು ಪ್ರಶ್ನೆಗಳ ಪಟ್ಟಿಯಲ್ಲಿ ಬಂದವು, ಆದರೆ ಒಂದೇ ಒಂದು ಪ್ರಶ್ನೆಗೂ ಉತ್ತರ ಇಲ್ಲದಂತಾಗಿದೆ. ಈ ೮ರಲ್ಲಿ ಮೂರು ಪ್ರಶ್ನೆಗಳು ಪ್ರಶ್ನೋತ್ತರ ಸಮಯದ ಕೊನೆಯಲ್ಲಿ ಬಂದಿದ್ದರಿಂದ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಮಂತ್ರಿ ಳ ಪ್ರಶ್ನೆಗಳಿಗೆ ಮಂತ್ರಿಗಳು ಸಮಯ ತೆಗೆದುಕೊಂಡರು.

ಅಧ್ಯಕ್ಷರು.—ಅದಕ್ಕೆ ನಾನು ಜವಾಬ್ದಾರನಲ್ಲ, ನೀವೂ ಜವಾಬ್ದಾರರಲ್ಲ, ಮಂತ್ರಿಗಳು ಸಮಯ ತೆಗೆದುಕೊಂಡಿದ್ದಕ್ಕೆ ಈ ಪುಸ್ತಕ ಜವಾಬ್ದಾರಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಂತ್ರಿಗಳು ಇಂದಿನ ಪ್ರಶ್ನೆಗೆ ಸಮಯ ತೆಗೆದುಕೊಂಡಿದ್ದಾರೆ. ಇದು ದೊಡ್ಡ ಪ್ರಶ್ನೆ. ನಿಧಾನವಾಗಿ ಉತ್ತರ ಕೊಡಲಿ. ಆದರೆ ಬೇರೆಯವು ಬಹಳ ಪ್ರಾಪ್ತಃಖ್ಯವಾದವುಗಳು, ಕಾರಣಾಂತರದಿಂದಲೇ ತಪ್ಪಿಸಿದ್ದಾರೆ ಎನ್ನುವ ತೀರ್ಮಾನಕ್ಕೆ ನಾನು ಬಂದಿದ್ದೇನೆ. ತಾವು ಯಾವಾಗ ಅವಕಾಶ ಕೊಡುತ್ತೀರಿ.

ಶ್ರೀ ಟಿ. ಬಿ. ಜಯಚಂದ್ರ.—ನನ್ನ ಪ್ರಶ್ನೆಯನ್ನು ಹೆಚ್.ಯು.ಡಿ.ಗೆ ವರ್ಗ ಮಾಡಿದ್ದೀರಿ ಆದರೆ ಸೈಟುಗಳ ಬಗ್ಗೆ ಇನ್‌ಫಾರ್‌ಮೇಷನ್ ಕೊಡಬೇಕಾದವರು ಬಿ.ಡಿ.ಓ,ಗಳು ಇದು ಗ್ರಾಮೀಣಾಭಿವೃದ್ಧಿ ಸಚಿವರಿಗೆ ಬರುತ್ತದೆ. ನಾವು ಪ್ರಶ್ನೆ ಕೊಟ್ಟಾಗ ಆದನ್ನು ಎಡಿಟ್ ಮಾಡುತ್ತೀರಿ, ಪ್ರಶ್ನೆ ಉದ್ದ ಇದ್ದರೆ ಕತ್ತರಿಸುತ್ತೀರಿ.